
ಪ್ರಭಾಸ್

# ಪ್ರಭಾಸ್‌ವಂಗ 'ಸ್ಪಿರಿಟ್'


ಸಂದೀಪ್ ರೆಡ್ಡಿ ವಂಗ

'ಅನಿಮಲ್' ಸಿನಿಮಾದ ಜನಪ್ರಿಯತೆ ಹಾಗೂ ಟೀಕೆ–ಟಿಪ್ಪಣಿಗಳಿಂದ ತೇಲುತ್ತಿರುವ ನಿರ್ದೇಶಕ ಸಂದೀಪ್ ರೆಡ್ಡಿ ವಂಗ ಅವರ ಮುಂದಿನ ಸಿನಿಮಾ 'ಸ್ಪಿರಿಟ್'. ಪ್ರಭಾಸ್ ಇದರ ನಾಯಕ. ಶೀರ್ಷಿಕೆ ಹಾಗೂ ನಾಯಕ ಎರಡೂ ಪಕ್ಕಾ ಆಗಿ ತಿಂಗಳುಗಳೇ ಉರುಳಿವೆ. 'ಸಲಾರ್' ಸಿನಿಮಾದ ಎರಡನೇ ಭಾಗದ ಚಿತ್ರೀಕರಣವನ್ನು ಮುಗಿಸಿದ ನಂತರ ಈ ಸಿನಿಮಾ ಕೆಲಸದಲ್ಲಿ ಪ್ರಭಾಸ್ ತೊಡಗಿಕೊಳ್ಳಲಿದ್ದಾರೆ.

'ಅನಿಮಲ್' ಸಿನಿಮಾದ ನಿರ್ಮಾಣ ವಿನ್ಯಾಸಕಾರರಾಗಿದ್ದ ಸುರೇಶ್ ಸೆಲ್ವರಾಜನ್ ಈ ಸಿನಿಮಾದಲ್ಲೂ ಆ ಜವಾಬ್ದಾರಿ ನಿರ್ವಹಿಸಲಿದ್ದಾರೆ. ಪ್ರಾಮಾಣಿಕ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ 'ಸಲಾರ್' ನಟ ಕಾಣಿಸಿಕೊಳ್ಳಲಿದ್ದು, ಉಳಿದ ಸಂಗತಿಯನ್ನೆಲ್ಲ ಸಂದೀಪ್ ರೆಡ್ಡಿ ವಂಗ ಗುಟ್ಟಾಗಿಯೇ ಇಟ್ಟಿದ್ದಾರೆ. ಈ ಚಿತ್ರವು 'ಅನಿಮಲ್'ಗಿಂತ ಅದ್ದೂರಿಯಾಗಿ ಇರಲಿದೆ ಎಂದಷ್ಟೇ ಸುರೇಶ್ ಹೇಳಿದ್ದಾರೆ. ಅವರಿಗೂ ಉಳಿದಂತೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ.

ಪ್ರಭಾಸ್ ಇಪ್ಪತ್ತೈದನೇ ಚಿತ್ರ ಇದಾಗಿದ್ದು, ಅವರ ಸ್ಟೈಲ್ ಸ್ಟೇಟ್‌ಮೆಂಟ್ ಅನ್ನು ವಂಗ ಇನ್ನೂ ಒಂದು ಹಂತ ಮೇಲಕ್ಕೆ ತೆಗೆದುಕೊಂಡು ಹೋಗುವ ಉತ್ಸಾಹದಲ್ಲಿದ್ದಾರೆ. ■

# ಅಭಿನಯಕ್ಕೆ ಪಂಕಜ್ ಒಪ್ಪಿದ ಪ್ರಸಂಗ



'ಕಣ್ಣೀರ ಧಾರೆ ಇದೇಕೆ ಇದೇಕೆ, ನನ್ನೊಲವಿನಾ ಹೂವೆ ಈ ಶೋಕವೇಕೆ?' – ರಾಜಕುಮಾರ್ ಕಂಠಸಿರಿಯ ಹಿಂದೂಸ್ತಾನಿ ರಾಗದ ಈ ಹಾಡನ್ನು ಕಣ್ಮುಚ್ಚಿಕೊಂಡು ಕೇಳಿದರೆ, ವಿಷಾದವೊಂದು ಇಡೀ ಮನಸ್ಸನ್ನು ಆವರಿಸಿಕೊಳ್ಳುತ್ತದೆ. ದೀರ್ಘಾವಧಿಯವರೆಗೆ ಹಾಡಿನ ಗುನುಗು ಕಾಡುತ್ತಲೇ ಇರುತ್ತದೆ. ಇತ್ತೀಚೆಗೆ ಅಗಲಿದ ಗಜಲ್ ಹಾಗೂ ಹಿಂದೂಸ್ತಾನಿ ರಾಗಗಳ ಗಾಯಕ ಪಂಕಜ್ ಉಧಾಸ್ ಅವರ ಕಂಠದಲ್ಲೂ ಅಂತಹ ಕಾಡುವ ಗುಣವೊಂದು ಇತ್ತು. ಆದರೆ, ಕನ್ನಡದಲ್ಲಿ ಅವರು 'ಸ್ಪರ್ಶ' ಸಿನಿಮಾದಲ್ಲಿ ಹಾಡಿದ 'ಬರೆಯದ ಮೌನದ ಕವಿತೆ' ಹಾಡು ಕನ್ನಡೇತರರು ಭಾಷೆಯ ಮೇಲೆ ಹಿಡಿತ ಸಾಧಿಸದ ಅಷ್ಟೂ ಕೊರೆಗಳನ್ನು ಉಳಿಸಿಬಿಟ್ಟಿತ್ತು. ಅದೇ ಕಾರಣಕ್ಕೆ ಆ ಸಿನಿಮಾದಲ್ಲೇ ಅವರು ಹಾಡಿದ್ದ ಇನ್ನೊಂದು ಹಾಡು 'ಚಂದಕಿಂತ ಚೆಂದ ನೀನೆ ಸುಂದರ' ಗಜಲ್ ಜನರಿಗೆ ಇಷ್ಟವಾದದ್ದು. ಅದರಲ್ಲಿ ತಪ್ಪುಗಳು ಇರಲಿಲ್ಲ ಎಂದೇನೂ ಅಲ್ಲ; ಸಹನೀಯವಾಗಿತ್ತೆನ್ನಬಹುದು.

ಪಂಕಜ್ ಅವರಿಗೆ ಸಿನಿಮಾ ಗಾಯಕರಾಗುವುದಕ್ಕೆ ಒಂದು ಮಟ್ಟಿಗೆ ಸಮ್ಮತಿ ಇತ್ತಾದರೂ ತೆರೆಮೇಲೆ ಕಾಣಿಸಿಕೊಳ್ಳಲು ಅತಿ ಸಂಕೋಚವಿತ್ತಂತೆ. ಇದನ್ನು ಮೊನ್ನೆಯಷ್ಟೇ ಹೇಳಿದವರು ನಿರ್ದೇಶಕ ಮಹೇಶ್ ಭಟ್. 'ನಾಮ್' ಹಿಂದಿ ಸಿನಿಮಾದಲ್ಲಿ ಲಕ್ಷ್ಮೀಕಾಂತ್ ಪ್ಯಾರೆಲಾಲ್ ಸಂಯೋಜನೆಯ ಮಧುರ ಗೀತೆಗಳಿದ್ದವು. ಅವುಗಳಲ್ಲಿ ಒಂದು 'ಚಿಟ್ಠಿ ಆಯಿ ಹೈ'. ಆನಂದ್ ಬಕ್ಷಿ ಸಾಹಿತ್ಯ ಬರೆದ ಈ ಗೀತೆಯ ಮೂಲಕವೇ ಪಂಕಜ್ ಅವರನ್ನು ಅನೇಕರು ಈಗಲೂ ನೆನೆಯುವುದು. ಈ ಗೀತೆ ಸಿನಿಮಾದಲ್ಲಿ ಬರುವಾಗ ಖುದ್ದು ಪಂಕಜ್ ಕಾಣಿಸಿಕೊಂಡಿದ್ದಾರೆ. ಮೆಹಫಿಲ್‌ನಲ್ಲಿ ಹಾಡುವ ಜಾಯಮಾನದ ಗೀತೆಯನ್ನೇ ಮಹೇಶ್ ಭಟ್ ಸಿನಿಮಾದಲ್ಲಿ ಅಳವಡಿಸಿದ್ದರು. ಸಂಜಯ್ ದತ್ ತರಹದ ನಾಯಕ ಇರುವ ಚಿತ್ರದ ಗೀತೆ ಇದು ಎಂದರೆ ಈಗಿನ ತಲೆಮಾರಿನವರಿಗೆ ಅಚ್ಚರಿಯಾಗಬಹುದು.

ಈ ಗೀತೆಯನನ್ನು ಹಾಡುವುದಷ್ಟೇ ಅಲ್ಲದೆ ಅಭಿನಯಿಸಲೂಬೇಕು ಎಂದು ಮಹೇಶ್ ಭಟ್, ಪಂಕಜ್ ಅವರನ್ನು ಒತ್ತಾಯಿಸಬೇಕಾಯಿತು. ಅಭಿನಯ ತಮ್ಮ ತುಡಿತವಲ್ಲ. ಹೀಗಾಗಿ ಅದಕ್ಕೆ ನ್ಯಾಯ ಸಲ್ಲಿಸುವುದು ಕಷ್ಟ ಎಂದೇ ಪಂಕಜ್ ಮೊದಲು ಹಿಂದೇಟು ಹಾಕಿದರು. ಮೆಹಫಿಲ್‌ಗಳಲ್ಲಿ ಹಾಡುವುದು ಬಿಟ್ಟರೆ ಅಭಿನಯ ಕಷ್ಟ ಎಂದ ಅವರನ್ನು ಕೊನೆಗೂ ಮಹೇಶ್ ಭಟ್ ಒಲ್ಲೈಸಿದರು. ಸಿನಿಮಾದಲ್ಲೂ ಮೆಹಫಿಲ್‌ನಲ್ಲೇ ಹಾಡುವ ದೃಶ್ಯವಿದೆ ಎಂದಾಗ ಕಡೆಗೆ ಒಪ್ಪಿದರು.

ಕ್ಯಾಮೆರಾ ಸ್ವಿಚ್‌ಆನ್ ಆದಾಗ ಪಂಕಜ್ ಹೊಸ ನಟನಂತೆ ಕಂಪಿಸುತ್ತಿದ್ದರು. ಒಂದಿನಿತು ಭಾವ ತಪ್ಪಿದಂತೆ ಆದರೂ ಸರಿಯಿಲ್ಲವೇನೋ ಎಂಬ ಆತಂಕ ಅವರಿಗೆ ಇತ್ತು. ಇದೆಲ್ಲವನ್ನೂ ಗಮನಿಸಿದ ಮಹೇಶ್ ಭಟ್, ಕೊನೆಗೂ ಅವರಿಂದ ಅಭಿನಯವನ್ನು ಹೊರತೆಗೆದರು. ಆ ಹಾಡಿನಲ್ಲಿ ಪಂಕಜ್ ಕಾಣಿಸಿಕೊಂಡಿದ್ದರಿಂದ ಅವರ ಜನಪ್ರಿಯತೆ ಇನ್ನಷ್ಟು ಹೆಚ್ಚಾದದ್ದು ಈಗ ಇತಿಹಾಸ. ■